Rega No BG 155 — ೨೯ — 1—3—1962

Sri "SATYAVADI"
— DAILY —
MYSORE 4
46 th Year

Protect the cow

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಸರ್ವಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

104 (3)

ನಿಜಲಿಂಗಪ್ಪನವರನು ಮುಖ ಮಂತ್ರಿತಕೆ ತರುವ ಸಂಭವ

ವೈಸೂರು ವಿಧಾನ ಸಭೆ ಚುನಾವಣೆಯಲ್ಲಿ ಆಯ್ಕೆ ಆಗಿರುವ ಕಾಂಗ್ರೆಸಿಗರಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರು ಗಂಪಿನವರೇ ಹೆಚ್ಚಿರುವರೆಂದು, ನಿಜಲಿಂಗಪ್ಪನವರನ್ನೇ ನಾಯಕರನ್ನಾಗಿ ಆರಿಸಲು ಅಗುಂವು ಪ್ರಯತ್ನಿಸುವ ಸಂಭವವಿದೆಯೆಂದು ಬೆಂಗಳೂರಿನಿಂದ ಬಂದ ವರದಿಯೊಂದು ತಿಳಿಸುತ್ತದೆ ಆವರು ಮುಖ್ಯ ಮಂತ್ರಿ ಆದರೆ ಆರು ತಿಂಗಳಲ್ಲಿ ಶಾಸನ ಸಭೆ ಸದಸ್ಯರಾಗಬೇಕು ಮತ್ತೊಂದು ವರದಿಯು ಪ್ರಕಾರ ಶ್ರೀ ಬಿ ಡಿ ಜತ್ತಿಯವರು ಮುಖ್ಯ ಮಂತ್ರಿ ಆಗಬಹುದು.

ಜಂಟಿಮಂತ್ರಿಮಂಡಲ ಇರುವುದು

ಕೇರಳದ ಮುಖ್ಯ ಮಂತ್ರಿ ಶ್ರೀ ಪಟ್ಟಂಥಾನು ಪಿಳ್ಳೈಯವರು ತಿರುವೇಂದ್ರಂನಲ್ಲಿ ನಿನ್ನೆ ಪತ್ರಿಕೆಯವರೊಡನೆ ಮಾತನಾಡುತ್ತಾ, ಕೇರಳದಲ್ಲಿ ಇನ್ನು 3ವರ್ಷಗಳ ವರಗೆ ಕಾಂಗ್ರೆಸು ಪಿಎಸ್ಪಿ ಸಮ್ಮಿಶ್ರ ಮಂತ್ರಿಮಂಡಲ ವಿರುವುದೆಂದು ತಿಳಿಸಿದರು ಕಾಂಗ್ರೆಸು ಮತ್ತು ಪಿಎಸ್ಪಿಯು ಶಾಸನ ಸಭೆ ಸದಸ್ಯರ ಜಂಟಿ ಸಭೆ ಆದನಂತರ ಶ್ರೀ ಪಟ್ಟಂರವರು ಪತ್ರಿಕೆಯವರೊಡನೆ ಮಾತನಾಡುತ್ತಾ, ಸಮ್ಮಿಶ್ರ ಮಂತ್ರಿ ಮಂಡಲ ಮುರಿದು ಹೋಗುವ ಆಶೆಯನ್ನು ಯಾರೂ ಹೊಂದಿರಬಾರದೆಂದು ನುಡಿದರು.

oo

ತಿರುವೇಂದ್ರಂನಲ್ಲಿ ನಿನ್ನೆ ಸೇರಿದ್ದ ಕೇರಳ ವಿಧಾನ ಸಭೆಯಲ್ಲಿ ಕಮ್ಯೂನಿಸ್ಟರು ಮಾತನಾಡಿ, ಪಾರ್ಲಿಮೆಂಟರಿ ಮತದಾನದ ಪ್ರತಿಧ್ವನಿ ಎಂಬಂತೆ, ಸಮ್ಮಿಶ್ರ ಮಂತ್ರಿಮಂಡಲ ವಿರುವಾಗಿ ಮುಖ್ಯ ಮಂತ್ರಿಯವರ ಜನತೆಯ ವಿಶ್ವಾಸ ಕಳೆದು ಕೊಂಡಿದ್ದಾರೆ ಎಂದರು ಕಮ್ಯೂನಿಸ್ಟ ಪಕ್ಷದ ಸದಸ್ಯರಾದ ಶ್ರೀ ಇ ಪಿ ಗೋಪಾಲರ್ ರವರು ಮಾತನಾಡಿ ಸಮ್ಮಿಶ್ರ ಮಂತ್ರಿಮಂಡಲ ಜಿಗಾಯಿಂಟ್ ಸ್ಕಾಕ್ ಟ್ರೇಡಿಂಗ್ ಕಂಪೆನಿ ಆಗಿದೆ. ಅದು ಕೊನೆ ಆಗಬೇಕು ಎಂದು ನುಡಿದರು.

ಗಾಯತ್ರೀ ದೇವಿಯವರ ವಿಜಯ

ಸ್ವತಂತ್ರ ಪಕ್ಷದ ಅಭ್ಯರ್ಥಿ ರಾಣಿ ಗಾಯತ್ರೀ ದೇವಿಯವರು ಜೈಪುರದ ಕ್ಷೇತ್ರದಿಂದ 1 ಲಕ್ಷ 70 ಸಾವಿರ ಮತಗಳನ್ನು ಪಡೆದು ಲೋಕಸಭೆಗೆ ಚುನಾಯಿತರಾದರು

ದಿನಾಚರಣೆ

ವೈಸೂರಿನ ಪುರಭವಾ ಬಾಲಕಿಯರ ಪ್ರೌಢ ಶಾಲಾ ವಿದ್ಯಾರ್ಥಿನಿಯರ ಸಂಘದ 3 ನೆಯ ವಾರ್ಷಿಕೋತ್ಸವ ನಾಳೆ ಮಧ್ಯಾಹ್ನ 4 ಗಂಟೆಗೆ ಪುರಸಭಾಧ್ಯಕ್ಷರಾದ ಶ್ರೀ ಹೆಚ್. ಕೆಂಪೇಗೌಡರ ಅಧ್ಯಕ್ಷತೆಯಲ್ಲಿ ನಡೆಯುವುದು. ಶ್ರೀ ಎಂ. ಗೋಪಾಲಕೃಷ್ಣ ಅಡಿಗರು ಮುಖ್ಯ ಭಾಷಣ ಮಾಡುವರು.

ಕೇರಳಕ್ಕೆ ಸಂಜೀವರೆಡ್ಡಿ

ಕೆಲವೇ ದಿನಗಳಲ್ಲಿ ಕಾಂಗ್ರೆಸು ಅಧ್ಯಕ್ಷರಾದ ಶ್ರೀ ಎಸ್. ಸಂಜೀವರೆಡ್ಡಿಯವರು ಕೇರಳಕ್ಕೆ ಭೇಟಿಯಿತ್ತು ಮಂತ್ರಿ ಮಂಡಲ ಬಿಕ್ಕಟ್ಟು ಉಂಟಾಗಿರುವ ಬಗ್ಗೆ ಪರಿಹರಿಸುವರೆಂದು ಗೊತ್ತಾಗಿದೆ.

ರೈಲಿಗೆ ಸಿಕ್ಕಿ ಮರಣ

ಚಿಂಗ್ಲಪ್ಟ್ 27— ಸ್ಟೇಷನ್ನಿನ ಹತ್ತಿರ ರೈಲು ಟ್ರಾಕ್ಯೆಯಲ್ಲಿ ಹಾದು ಹೋಗುತ್ತಿದ್ದ 50 ವರ್ಷದ ವೀರಭದ ಶೆಟ್ಟಿ ಮದರಾಸಿನಿಂದ ಬರುತ್ತಿದ್ದ ರೈಲಿಗೆ ಸಿಕ್ಕಿ ಹತನಾದನು.

ಲೋಕಸಭೆಗೆ ಆಯ್ಕೆ

ಬೆಂಗಳೂರು 28— ಭಾರತ ಕೈಗಾರಿಕಾ ಮಂತ್ರಿ ಶ್ರೀ ಕೆ ಸಿ ರೆಡ್ಡಿ, ಭಾರತ ವ್ಯವಸಾಯ ಉಪಮಂತ್ರಿ ಕೃಷ್ಣಪ್ಪನವರು, ಭಾರತ ಗೃಹಮಂತ್ರಿ ಶ್ರೀ ದಾತಾರರು ಲೋಕಸಭೆಗೆ ಆಯ್ಕೆಯಾದರು.

ವ್ಯಾಪಾರ ಇಳಿತಾಯ

ರಂಗೂನು 28— ಎರಡನೇ ಯುದ್ಧಕ್ಕೆ ಮುಂಚೆ ಇದ್ದ ಅಂತರರಾಷ್ಟ್ರೀಯ ಅಕ್ಕಿ ವ್ಯಾಪಾರವು ಈಚಿನ ವರ್ಷಗಳಲ್ಲಿ ಒಕ್ಕಳ ಇಳಮುಖವಾಗಿದೆ ಎಂದು ನಡೆದ ಎಫ್ ಎ ಓ ಸಮಿತಿಯಲ್ಲಿ ಬರ್ಮಾ ವ್ಯಾಪಾರಾಭಿವೃದ್ಧಿ ಮಂತ್ರಿ ತಿಳಿಸಿದರು.

ಮುನಿಸಿಪಲ್ ಕಮಿಷನರ್‌ರವರ ಆಫೀಸು,
ಸಿಟಿ ಮುನಿಸಿಪಲ್ ಕೌನ್ಸಿಲ್,
ಮೈಸೂರು
ತಾರೀಖು 22-2-62

R8 Annual Sale No. 1
1961-62

ಸಂಕ್ಷಿಪ್ತ ಪ್ರಕಟಣೆ

ಇದರಿಂದ ಸರ್ವಸ್ವ ಜನಗಳಿಗೆ ತಿಳಿಯಪಡಿಸುವುದೇನೆಂದರೆ : ಮೈಸೂರು ಸಿಟಿ ದೇವರಾಜ ಮಾರ್ಕೆಟ್ಟಿಗೆ 1962-63 ನೇ ಸಾಲಿನಲ್ಲಿ (1-4-1962 ರಿಂದ 31-3-63 ಪೂರ್ತಿ) ಬಂಕಕ್ಕೆ ತರಕಾರಿಗೂಡೆ ವಗ್ಗೆರೆಗಳ ಪೇಲೆ ವಿದಾಯಕದಂತೆ ' ಡ್ಯೂಲಿ ಫೀ ' ವಸೂಲ್ಮಾಡುವ ಹಕ್ಕನ್ನು ತಾರೀಖು 5-3-1962 ನೇ ಸೋಮವಾರ ಬೆಳಿಗ್ಗೆ 11 ಘಂಟೆಗೆ ಮುನಿಸಿಪಲ್ ಕಮಿಷನರವರಿಂದ ಒಹಿರಂಗವಾಗಿ ಠರಾಜು ಮೂಲಕ ಏಲೇಮಾಡಲಾಗುತ್ತದೆ. ಇಷ್ಟವುಳ್ಳವರು ಸಕಾಲಕ್ಕೆ ಹಾಜರಾಗಿ ಠರಾಜು ನಿಬಂಧನೆಗಳಿಗೆ ಒಳಪಟ್ಟು ಭಡಸವಾಲು ಮೂಲಕ ಬಾಬಸ್ತು ಪಡೆಯಬಹುದು.

ಠರಾಜು ನಿಬಂಧನೆಗಳು ಮತ್ತು ಹೆಚ್ಚಿನ ವಿವರಗಳನ್ನು ರೆವಿನ್ಯೂ ಆಫೀಸಿನಲ್ಲಿ ಆಫೀಸು ವೇಳೆಯಲ್ಲಿ ತಿಳಿಯಬಹುದು.

(ಸಹಿ) ಬಿ. ಎಸ್. ನಂಜುಂಡೆ ಗೌಡೆ
ಮುನಿಸಿಪಲ್ ಕಮಿಷನರ್

ವಿವಿಧ ವಿಷಯಗಳು

ಬೊಂಬಾಯಿ 28— ಶಾಸನ ಸಭೆಯ ಒಂದು ಚುನಾವಣೆಯು ಲಾಟರಿ ಮೂಲಕ ನಿರ್ಣಯಿಸಲಾಯಿತು — ಕೊಲಾಬಾ ಜಿಲ್ಲೆಯ ಮಹಾಡ್ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಸದಾಂತರೂ ಮತ್ತು ಪಿಎಸ್ಪಿಯ ಸಾಲಂಕೆಯರೂ ಸ್ಪರ್ಧಿಸಿದ್ದು ಇಬ್ಬರಿಗೂ 12664 ಓಟುಗಳು ಬಂದಿದ್ದರಿಂದ ಚುನಾವಣಾಧಿಕಾರಿಗಳು ಲಾಟರಿ ತೆಗೆಯಲು ಕಾಂಗ್ರೆಸ್ಸು ಸ್ಪರ್ಧಿ ಅದೃಷ್ಟವಂತನಾಗಿ, ಚುನಾಯಿಸಲ್ಪಟ್ಟನು

ನವದೆಹಲಿ 28— ಪಂ|| ನೆಹರು, ಶ್ರೀ ಮುರಾರ್ಜಿ ದೇಸಾಯಿ, ಶ್ರೀ ಲಾಲ ಬಹದ್ದೂರು ಶಾಸ್ತ್ರಿ, ಮತ್ತು ಶ್ರೀ ಜಿ ಎಲ್ ನಂದರವರು ಲೋಕಸಭೆಗೆ ಬಹುಸಂಖ್ಯಾ ಮತಗಳಿಸಿ ಚುನಾಯಿತರಾದರು.

ನವದೆಹಲಿ 28— ಡೇರಿಯಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಪಿಎಸ್ಪಿ ಪಾರ್ಟಿಯ ಅಧ್ಯಕ್ಷ ಶ್ರೀ ಅಶೋಕ ಮೆಹತಾ ತಾವು ಸೋತಿರುವುದಾಗಿ ಒಪ್ಪಿಕೊಂಡಿದ್ದಾರೆ ; ಆದರೆ ಅಧಿಕೃತ ಪ್ರಕಟಣೆ ಹೊರಬಿದ್ದಿಲ್ಲ.

ಹೈದರಾಬಾದು 28— ಲೋಕಸಭೆ ಸ್ಪರ್ಧಿಸಿದ್ದ ಭಾರತೀಯ ಜನಸಂಘದ ಅಧ್ಯಕ್ಷ ಎ ವಸುರಾಲಾ ರಾಮರಾವ್ ಸೋತಿದ್ದುದಲ್ಲದೆ ಡಿವಾಜಿಟ್ಟನ್ನೂ ಕಳೆದುಕೊಂಡರು.

ಗ್ವಾಲಿಯರು ಕ್ಷೇತ್ರದಿಂದ ಕಾಂಗ್ರೆಸಿನ ಮಹಾರಾಣಿ ವಿಜಯ ಸಿಂಧ್ಯರವರು ಲೋಕಸಭೆಗೆ ಆಯ್ಕೆ ಆದರು.

ನವದೆಹಲಿ 28— ಹೊಸದಾಗಿ ಚುನಾಯಿತರಾದ ರಾಜ್ಯಗಳ ಶಾಸನಸಭಾ ಸದಸ್ಯರು ತಮ್ಮ ಪಾರ್ಟಿ ನಾಯಕರನ್ನು ಮಾರ್ಚಿ 7 ರಂದು ಚುನಾಯಿಸುವರು ; ಕಾಂಗ್ರೆಸ್ಸು ಪಾರ್ಟಿಯು ಸ್ಪಷ್ಟ ಬಹುಮತ ಪಡೆದಿರುವ ಕಡೆಗಳಲ್ಲಿ ಮಾರ್ಚಿ ಮಧ್ಯದಲ್ಲಿ ಸಂಸ್ಥಾನ ಸ್ಥಾಪಿಸಲಾಗುವುದು.

ತಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
2 ಏಕಾದಶಿ ಪೂರ್ವಾಷಾಢ

ಗಂಡಹೆಂಡರ ಗೆಲುವು

ಹೈದಂತಾಬಾದು— ಕಮ್ಯುನಿಸ್ಟು ಪತಿಪತ್ನಿಯಾಂದ ಶ್ರೀ ಅರುಟ್ಲು ರಾಮ ಚಂದ್ರ ರೆಡ್ಡಿ (ಭೊಂಗೀರ್) ಮತ್ತು ಅವರ ಪತಿ ಅರುಟ್ಲು ಕಮಲಾದೇವಿ (ಅಲೈರ್) ಶಾಸನಸಭೆಗೆ ಚುನಾಯಿತರಾದರು.

ಅದ್ಭುತ ಚುನಾವಣಾ ದಾಖಲೆ

ತಿರುನಲವೆಲ್ಲಿ ಜಿಲ್ಲೆಯಲ್ಲಿ ಸ್ಪರ್ಧಿಸಿದ್ದ 19 ಮಂದಿ ಕಾಂಗ್ರೆಸ್ಸು ಸ್ಪರ್ಧಿಗಳೂ ಜಯ ನಾಯಿತರಾದರು.

ಚಪ್ಪರಗಳಿಗೆ ರುಸುಂ

ಮದರಾಸು—/ಚುನಾವಣಾ ಪ್ರಚಾರಕ್ಕಾಗಿ ನಗರದಲ್ಲಿ ರಾಜಕೀಯ ಪಕ್ಷಗಳು ಹಾಕಿರುವ ಬಹುಸಂಖ್ಯೆಯ ಚಪ್ಪರಗಳ ಬಗ್ಗೆ ಕಾರ್ಪೋರೇಷನ್ನು ರುಸುಂ ವಸೂಲ್ಮಾಡ ಬೇಕೆಂದು ಕಮಿಷನರು ಹೇಳಿರುವರು.

ಎಮ್ಮೆಕರುಗಳ ಪಾರಿತೋಷಕ

ನವದೆಹಲಿ— ಭಾರತ ಸಂಕಾಂಕ್ಕೆ ಬಹುಮಾನವಿಲು ಪತಿ ಜಾಕ್ಯಲೈಕ್ ಕೆನಡಿಯವರು ಸ್ವತಃ ಆರಿಸಿದ ಎಂಡು ಎಮ್ಮೆಕರುಗಳನ್ನು ವಿಮಾನದಲ್ಲಿ ನ್ಯೂ ಯಾರ್ಕಿನಿಂದ ಕಳುಹಿಸಲಾಗಿದೆ : ಇಂದು ಅವು ಪಾಲಂ ವಿಮಾನ ನಿಲ್ದಾಣಕ್ಕೆ ತಲಪುವವು ; ಎಂಡರ ಕೂಕ 2500 ಪೌಂಡುಗಳು : ತಾ || 12 ರಂದು ಸ್ಥಳಾನಿ ನೆಹರೂರವರಿಗೆ ಪತಿ ಕೆನಡಿಯವರಿಂದ ಕೊಡಲಾಗುವುದು.

ರಾಷ್ಟ್ರಾಧ್ಯಕ್ಷರ ಆಯ್ಕೆ

ನವದೆಹಲಿ— ಭಾರತಾಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯು ಮೇ 10 ರಂದು ನಡೆಯುವುದು.

ಸ್ಮರಣಾರ್ಥ ಅಂಚೆಚೀಟಿ

ಶ್ರೀವಿ ದಯಾನಂದ ಸಂಸ್ಥೆಯವರಿಂದ ಜನ್ಮದಿನೋತ್ಸವದ ನೆನಪಿಗಾಗಿ ಅಂಚೆ ಮತ್ತು ತಂತಿ ಶಾಖೆಯವರು 15 ನಯೆ ಪೈಸೆ ಮೌಲ್ಯದ ವಿಶೇಷ ಅಂಚೆ ಚೀಟಿಯೊಂದನ್ನು ಹೊರಡಿಸಲಿದ್ದಾರೆ ಈ ವಿಶೇಷ ಅಂಚೆ ಚೀಟಿಯನ್ನು ಬೆಂಗಳೂರು ಜನರಲ್ ಪೋಸ್ಟ್ ಆಫೀಸ್ ಮಂಗಳೂರು, ಬೆಳಗಾಂವಿ ಮತ್ತು ಮೈಸೂರು ನಗರಗಳಲ್ಲಿರುವ ಹೆಡ್ ಪೋಸ್ಟ್ ಆಫೀಸುಗಳು ಈ ಮಾಹೆ 4 ನೆಯ ತಾ || ಭಾನುವಾರ ಪ್ರಾತಃಕಾಲ 10 ಗಂಟೆಗಳಿಂದ ಮಾರುವವು.

ಕೊಂಮಂಗಲ ಕಣಿವೆ ಸೀವೇಜು

ರೂ. 25 ಲಕ್ಷ ವೆಚ್ಚದಲ್ಲಿ ಕೊಂಮಂಗಲ ಕಣಿವೆಯ ಸೀವೇಜು ಕಾರ್ಯವನ್ನು ಬೆಂಗಳೂರು ಕಾರ್ಪೊರೇಷನ್ ಕೈಗೊಳ್ಳಲಿದೆ.

ವುಡ್‌ಲ್ಯಾಂಡ್ಸ್ ಚಿತ್ರ ಜನಪ್ರಿಯ 3 ನೇ ವಾರ

.... ಕಹಸೆಗಟ್ಟಿ ಜನರು ನೋಡಿ ಆನಂದಿಸುತ್ತಿರುವ ಅಮೋಘ ಚಿತ್ರವಿದು ....

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್
ಸಂಗೀತ- ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ — 23-2-62 ರಿಂದ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)
ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ರೇಲಂಗಿ, ಕಾಂತಾರಾವ್
[ದಿನವಹಿ 3 ಆಟಗಳು]

'SATYAVADI'

Statement of Ownership and other particulars

Place of Publication	Mysore
Periodicity of its publication	Daily
Printer's, Publishers, Editor's Name	M. S. Krishna Rao
Nationality	Indian
Address	1067 Chamarajapuram, Mysore.
Names and addresses of Individuals who owns the Newspaper	M. S. Krishna Rao

I, M. S. Krishna Rao, hereby declare that the particulars given above are true to the best of my knowledge and belief.

Dated 1 st March 1962

M S. Krishna Rao
Signature of Publisher



.... ಅಮೋಲಿಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು ....

Help The 'Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.